ಕರ್ನಾಟಕ ವಿಧಾನಸಭೆ

ಸೋಮವಾರ 21ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪರವರು)

ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಕೇಂದ್ರ ಸರ್ಕಾರವು ಸಹಾಯಧನ ನೀಡುವುದರಲ್ಲಿ ರಾಜ್ಯ ಕಬ್ಬು ಬೆಳೆಗಾರರಿಗೆ ಅನ್ಯಾಯ ಮಾಡಿರುವ ಬಗ್ಗೆ

ಅಧ್ಯಕ್ಷರು :- ಮಾನ್ಯ ಖರ್ಗೆಯವರೇ, ಪ್ರಾರಂಭ ಮಾಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಸನ್ಮಾನ್ಯ ಸಭಾಧ್ಯಕ್ಷರೇ.....

ಅಧ್ಯಕ್ಷರು :- ಗೌಡರೇ ರಿಪ್ಲೈ ಆದ ಮೇಲೆ ನಾನು ಅಲೋ ಮಾಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ಕೇಂದ್ರ ಸರ್ಕಾರ 600 ಕೋಟಿ ರೂಪಾಯಿಗಳ ಸಹಾಯಧನವನ್ನು ಕೇವಲ ಮೂರು ರಾಜ್ಯಗಳ ಕಬ್ಬು ಬೆಳೆಗಾರರಿಗೆ ಮಾತ್ರ ಕೊಡತಕ್ಕಂಥಾ ಒಂದು ಅನ್ಯಾಯವನ್ನು ಮಾಡಿದೆ. ಇದರಿಂದ, ಕರ್ನಾಟಕದ ಕಬ್ಬು ಬೆಳೆಗಾರರಿಗೆ ಅನ್ಯಾಯವಾಗುತ್ತಿದೆ. ಇದು ಬಹಳ ಪ್ರಮುಖವಾದುದು. ದಯಮಾಡಿ, ಇದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು :- ರಿಪ್ಲೈ ಆದಮೇಲೆ ರೈಸ್ ಮಾಡಿ...

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಇದು ಕರ್ನಾಟಕ ರಾಜ್ಯದ ಕಬ್ಬು ಬೆಳೆಗಾರರಿಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡತಕ್ಕಂಥಾದ್ದು, ಅನ್ಯಾಯ ಮಾಡತಕ್ಕಂಥಾದ್ದು ಮಡುತ್ತಿದೆ. ದಯಮಾಡಿ, ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಡಬೇಕು. ಈ ರಾಜ್ಯದ ಕಬ್ಬು ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡತಕ್ಕ ಕೆಲಸ ಕೇಂದ್ರಸರ್ಕಾರದಿಂದ ಆಗಿಲ್ಲ.

ಅಧ್ಯಕ್ಷರು :- ರಿಪ್ಲೈ ಆದ ಮೇಲೆ ನಿಮಗೇ ಅವಕಾಶ ಕೊಡುತ್ತೇನೆ.

– ಗೊಂದಲ –

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಈ ರಾಜ್ಯದ ಕಬ್ಬು ಬೆಳೆಗಾರರ ಹಿತವನ್ನು ಕಾಪಾಡತಕ್ಕ ನಿಲುವನ್ನು ನಾವು ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡಬೇಕಾಗುತ್ತಿದೆ. ದಯಮಾಡಿ, ಇದಕ್ಕೆ ತಾವು ಅನುಮತಿ ಕೊಡಬೇಕು.

ಅಧ್ಯಕ್ಷರು :- ನೀವು ರಿಪ್ಲೈ ಆದಮೇಲೆ ಈ ವಿಷಯವನ್ನು ರೈಸ್ ಮಾಡಿ ಈಗ ನಿಮಗೆ ಕೊಟ್ಟಿದೆ, ಎಲ್ಲರಿಗೂ ಕೊಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಇವತ್ತು ಬರ ಪರಿಹಾರದ ವಿಚಾರವಾಗಿ ಉತ್ತರ ಕೊಡುವುದು ಎಷ್ಟು ಅವಶ್ಯಕವೋ, ಅಷ್ಟೇ ಇವತ್ತು ನಮ್ಮ ರಾಜ್ಯದ ಕಬ್ಬು ಬೆಳೆಗಾರರ ಹಿತವನ್ನು ಕಾಪಾಡುವುದು ಅವಶ್ಯಕವಾಗಿದೆ.

+ ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) :– ಸಭಾಧ್ಯಕ್ಷರೇ, ಇವತ್ತಿನಿಂದ ಲೋಕಸಭೆಯ ಅಧಿವೇಶನ ಪ್ರಾರಂಭವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆಯ, ರಾಜ್ಯಸಭೆಯ ಸದಸ್ಯರುಗಳನ್ನು ಕರೆದು, ಕರ್ನಾಟಕ ಸಮಸ್ಯೆಗಳ ಬಗ್ಗೆ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂಬುದನ್ನು ಅವರು ವಿನಂತಿ ಮಾಡಿದ್ದಾರೆ. ಇದರ ಹಿನ್ನೆಲೆಯಲ್ಲಿಯೇ ಕೇಂದ್ರ ಸರ್ಕಾರದವರು ಕೇವಲ 3 ರಾಜ್ಯಗಳಿಗೆ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 1400 ಕೋಟಿ ರೂಪಾಯಿಗಳು ರೈತರಿಗೆ ಬಾಕಿ ಇದೆ. ಮೂರು ವರ್ಷಗಳಿಂದ ಸಾಲದಲ್ಲಿದ್ದಾರೆ. ಬರಗಾಲದಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿಯೂ ಅವರಿಗೆ ಬರಬೇಕಾದ ಬಾಕಿಯನ್ನು ಕೊಡುವುದಿಲ್ಲವಾದರೆ, ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಮ್ಮ ಸಹಕಾರಕ್ಕೆ ಬರದೇಹೋದರೆ ಯಾವ ರೀತಿ ನಮ್ಮ ರೈತರು ಬದುಕಬೇಕು? ಆದ್ದರಿಂದ, ಮಾನ್ಯ ಮುದ್ದಹನುಮೇಗೌಡ ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಅದಕ್ಕೆ ನೀವು ಅವಕಾಶ ಮಾಡಿಕೊಡಿ. ಕೇಂದ್ರಸರ್ಕಾರ ಮಾಡಿರತಕ್ಕ ಕ್ರಮ ಏನಿದೆ, ಅದು ಮಲತಾಯಿ ದೋರಣೆ. ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕಂಥ ರೈತ ವಿರೋಧಿ ಕ್ರಮವನ್ನು ನಾವು ಖಂಡಿಸಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು :– ರಿಪ್ಲೈ ಆದಮೇಲೆ ಮಾತನಾಡಿ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ. ಆರ್. ಸಿಂಧ್ಯ :– ಸದನದಲ್ಲಿ ಆಡಳಿತ ಪಕ್ಷದವರು ಇದರ ಬಗ್ಗೆ ಒಂದು ನಿರ್ಣಯವನ್ನು ಮಂಡಿಸಬೇಕು. ಕೇಂದ್ರಸರ್ಕಾರದವರು ಇದು ಮೊದಲನೇ ಬಾರಿ ಅಲ್ಲ, ಹಲವಾರು ಬಾರಿ ಹೀಗೆ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದರಲ್ಲಿ ಏನೂ ತಪ್ಪಿಲ್ಲ.

– ಗೊಂದಲ –

ಶ್ರೀ ಪಿ.ಜಿ. ಆರ್. ಸಿಂಧ್ಯ :– ರಾಜ್ಯಸರ್ಕಾರದವರು ಆಗಾಗ್ಗೆ ಪತ್ರಿಕೆಗಳಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಪ್ರಮುಖವಾಗಿ ಮಾನ್ಯಮುಖ್ಯಮಂತ್ರಿಗಳು ಸದನದಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ಮಂಡಿಸಬೇಕು. ಕೇಂದ್ರಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ. ನಮ್ಮ ರೈತರಿಗೆ ಅನ್ಯಾಯವಾಗಿದೆ. ಈ ಅನ್ಯಾಯದ ವಿರುದ್ಧ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ.

– ಗೊಂದಲ –

ಅಧ್ಯಕ್ಷರು :– ರೆಕಾರ್ಡ್ ಮಾಡಿಕೊಳ್ಳಬೇಡಿ. ಯಾವುದನ್ನೂ ತೆಗೆದುಕೊಳ್ಳಬೇಡಿ.

XX

– ಗೊಂದಲ –

ಅಧ್ಯಕ್ಷರು :– ಇದೇನಿದು? ಏನು ಮಾಡುತ್ತಾ ಇದ್ದೀರಿ ಅಂತ? ಸ್ವಲ್ಪ ಎಲ್ಲರೂ ಕುಳಿತುಕೊಳ್ಳುತ್ತೀರಾ? ನೀವು ಆಮೇಲೆ ಮಾತನಾಡಿ. ಮೊದಲು, ಇವತ್ತಿನ ಅಜೆಂಡಾದಲ್ಲಿ ಬರ ಚರ್ಚೆಯ ಮೇಲೆ, ಉತ್ತರ ಇದೆ. ಆದ್ದರಿಂದ, ಮೊದಲು ರಿಪ್ಲೈ ಆಗಲಿ, ಇದಾದ ಮೇಲೆ ಅವಕಾಶ ಕೊಡುತ್ತೇನೆ.

– ಗೊಂದಲ –

(+ಈ ಚಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

(XXಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಾಗಿಲ್ಲ)

ಶ್ರೀ ಪಿ.ಜಿ. ಆರ್. ಸಿಂಧ್ಯ :– ಅಧ್ಯಕ್ಷರೇ, ದಯವಿಟ್ಟು ನನ್ನ ಮಾತನ್ನು ಕೆಳಿ. ನಾನು ಹೇಳುವುದು, ಇದರ ಬಗ್ಗೆ ಚರ್ಚೆ ಅನಾವಶ್ಯಕ.

ಅಧ್ಯಕ್ಷರು :– ಇದೇನಿದು? ಏನು ಮಾಡುತ್ತಾ ಇದ್ದೀರಿ ಅಂತ? ಸ್ವಲ್ಪ ಎಲ್ಲರೂ ಕುಳಿತುಕೊಳ್ಳುತ್ತೀರಾ? ನೀವು ಆಮೇಲೆ ಮಾತನಾಡಿ. ಮೊದಲು, ಇವತ್ತಿನ ಅಜೆಂಡಾದಲ್ಲಿ ಬರ ಚರ್ಚೆಯ ಮೇಲೆ, ಉತ್ತರ ಇದೆ. ಆದ್ದರಿಂದ, ಮೊದಲು ರಿಪ್ಲೈ ಆಗಲಿ, ಇದಾದ ಮೇಲೆ ಅವಕಾಶ ಕೊಡುತ್ತೇನೆ.

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯ :– ಅಧ್ಯಕ್ಷರೇ, ದಯವಿಟ್ಟು ನನ್ನ ಮಾತನ್ನು ಕೇಳಿ ನಾನು ಹೇಳುವುದು, ಇದರ ಬಗ್ಗೆ ಚರ್ಚೆ ಅನಾವಶ್ಯಕ.

ಅಧ್ಯಕ್ಷರು :– ನೀವು ಅನುಭವ ಇರತಕ್ಕ ಶಾಸಕರು, ನೀವೇ ಈ ರೀತಿ ಮಾಡಿದರೆ ಹೇಗೆ?

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮಾನ್ಯ ಮುದ್ದಹನುಮೇಗೌಡರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಿರ್ಣಯದ ರೂಪದಲ್ಲಿ ಮಾನ್ಯ ಸಭಾನಾಯಕರು ಮಂಡಿಸಬೇಕು. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು. ಕೇಂದ್ರ ಸರ್ಕಾರ ರಾಜ್ಯದ ಕಬ್ಬು ಬೆಳೆಯುವ ರೈತರಿಗೆ ಮಾಡತಕ್ಕ ಅನ್ಯಾಯವನ್ನು ಹೊರಗಳೆಯಬೇಕಾಗುತ್ತದೆ.

– ಗೊಂದಲ –

ಅಧ್ಯಕ್ಷರು :– ರಿಪ್ಲೈ ಒಂದೂವರೆ ಗಂಟೆ ಆಗಬಹುದು. ಇದಾದ ಮೇಲೆ ನಾನು ಖಂಡಿತವಾಗಿಯೂ ಅಲೋ ಮಾಡುತ್ತೇನೆ. ರಿಪ್ಲೈ ಆದಮೇಲೆ, ಮೊದಲು ಇದನ್ನೇ ತೆಗೆದುಕೊಳ್ಳೋಣ. ಎಲ್ಲರೂ ಕುಳಿತುಕೊಳ್ಳಿ.

– ಗೊಂದಲ –

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮಾನ್ಯ ವಿರೋದ ಪಕ್ಷದ ನಾಯಕರು ಏನು ಹೇಳಿದಾರೆ. ಅದರ ಬಗ್ಗೆ ನಮ್ಮದೇನೂ ವಿರೋಧ ಇಲ್ಲ.

ಅಧ್ಯಕ್ಷರು :– ರಿಪ್ಲೈ ಆದಮೇಲೆ ಮಾತನಾಡಿ. ನಾನು ಯಾರಿಗೂ ಈಗ ಅವಕಾಶ ಕೊಡುವುದಿಲ್ಲ. ಆಮೇಲೆ ನೀವು ಮಾತನಾಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮುಖ್ಯಮಂತ್ರಿಗಳು ಒಂದು ನಿರ್ಣಯವನ್ನು ಮಂಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಮೊನ್ನೆ ನಡೆದ ಸಭೆಯಲ್ಲಿ ಲೋಕಸಭಾ ಸದಸ್ಯರಿಗೆ ಹೇಳಿದ್ದಾರೆಯೇ? ಇದಕ್ಕೆ ಅಂಕಿ ಅಂಶಗಳು ಬೇಕಾಗುತ್ತದೆ.

ಅಧ್ಯಕ್ಷರು :– ನೀವು ಆಮೇಲೆ ಮಾತನಾಡಿ. ನಿಮ್ಮಂಥ ಅನುಭವಿ ಶಾಸಕರೇ ಹೀಗೆ ಮಾಡಿದರೆ ಹೇಗೆ? ರಿಪ್ಲೈ ಆದಮೇಲೆ ಕೊಡುತ್ತೇನೆಂದು ಹೇಳುತ್ತಾ ಇದ್ದೇನಲ್ಲಾ

ಶ್ರೀ ಬಿ. ಸೋಮಶೇಖರ್ :– ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು :– ಹೌದು ಸಭಾನಾಯಕರು ತರುತ್ತಾರೆ. ತರಬಹುದು. ಸೋಮಶೇಖರ್‌ರವರೇ ಅವರಿಗೆ ಹೇಳಿದ ರಿಪ್ಲೈಯನ್ನು ನಿಮಗೂ ಹೇಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ....

ಶ್ರೀ ಬಿ. ಸೋಮಶೇಖರ್ :– ಮಾನ್ಯ ಅಧ್ಯಕ್ಷರೇ, ಕೇಂದ್ರ ಸರಕಾರದವರು ಎರಡೂ ವಿಚಾರಗಳಲ್ಲಿ ಅಂದರೆ ಬರಪರಿಹಾರ ಕಾಮಗಾರಿಗಳ ವಿಚಾರದಲ್ಲಿ...

ಅಧ್ಯಕ್ಷರು :– ಸೋಮಶೇಖರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ನಮ್ಮ ಮುಂದೆ ಅಜೆಂಡಾದಲ್ಲಿ ಇರುವುದು ರಿಪ್ಲೈ ಮಾತ್ರ... ಒಂದು ಗಂಟೆಯ ನಂತರ ಈ ಬಗ್ಗೆ ಮಾತನಾಡಬಹುದು. ಅದರಿಂದ ತೊಂದರೆಗಳೇನಿವೆ?

ಶ್ರೀ ಬಿ. ಸೋಮಶೇಖರ್ :– ಬೇರೆಯವರಿಗೆ ತಾವುಗಳು ಅವಕಾಶವನ್ನು ಕೊಡುತ್ತೀರಿ, ನನಗೆ ಏಕೆ ಕೊಡುವುದಿಲ್ಲ

ಅಧ್ಯಕ್ಷರು :– ಒನ್ ಅವರ್‌ನಲ್ಲಿ ನಿಮಗೆ ಏನಾದರೂ ತೊಂದರೆಯಾಗುತ್ತದೆಯೇ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ರಾಜ್ಯದಲ್ಲಿ ಬರಗಾಲದ ಸಮಸ್ಯೆಯಷ್ಟೇ ಪ್ರಮುಖವಾದ ಸಮಸ್ಯೆಯು ಕಬ್ಬು ಬೆಳೆಗಾರರ ಸಮಸ್ಯೆ ಇದಕ್ಕೂ ಅವಕಾಶ ಮಾಡಿಕೊಡಿ.

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರೇ, ಇದು ಆ ಕುರಿತು ಪ್ರಶ್ನೆ ಮಾಡುವ ವೇದಿಕೆಯೇ?

ಅಧ್ಯಕ್ಷರು :– ವೇದಿಕೆಯ ಪ್ರಶ್ನೆಯಲ್ಲ... ಅವರ ಕಷ್ಟ ಅವರು ಇಲ್ಲಿ ಹೇಳಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಸುಮ್ಮನಿರಿ. ಸರಕಾರದವರು ಉತ್ತರವನ್ನು ಕೊಡುತ್ತಾರೆ.

ನನಗೆ ತಮ್ಮ ವಿಚಾರಗಳು ಅರ್ಥವಾಗಿವೆ. ದಯವಿಟ್ಟು ಕುಳಿತುಕೊಳ್ಳಿ

– ಗೊಂದಲ –

ಶ್ರೀ ಬಿ. ಸೋಮಶೇಖರ್ :– ನನಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ನಾನು ಅಲೋ ಮಾಡಿಲ್ಲ, ನೀವು ಮಾತನಾಡಬೇಕೆಂದರೆ ಹೇಗೆ? ನಾನು ಯಾರಿಗೂ ಮಾತನಾಡಲು ಅವಕಾಶವನ್ನು ಕೊಟ್ಟಿಲ್ಲ. ಅವರಷ್ಟಕ್ಕೆ ಅವರೇ ವಾಲಂಟಿಯರ್ ಆಗಿ ಮಾತನಾಡುತ್ತಿರುವುದು ನಾನು ಯಾರಿಗೂ ಅಲೋ ಮಾಡಿಲ್ಲ. ರಿಪ್ಲೈ ಆದಮೇಲೆ ಮಾತನಾಡಿ ಎಂದು ಹೇಳುತ್ತಾ ಇದ್ದೇನೆ. ತಾವುಗಳು ಮಾತನಾಡುತ್ತಿದ್ದರೆ ನಾನೇನು ಮಾಡುವುದಕ್ಕೆ ಆಗುತ್ತದೆ ಹೇಳಿ?

ಶ್ರೀ ಬಿ. ಸೋಮಶೇಖರ್ :– ಬೇರೆಯವರು ಮಾತನಾಡಿದ್ದು ರೆಕಾರ್ಡಗೆ ಹೋಗಿದೆ. ನಾನೂ ಕೂಡ ಮಾತನಾಡಲು ಅವಕಾಶ ಕೊಡಿ.

Mr . Speaker :- I have not allowed anybody.

ಶ್ರೀ ಬಿ. ಸೋಮಶೇಖರ್ :– ಬೇರೆಯವರು ಮಾತನಾಡಿದ್ದು ರೆಕಾರ್ಡಗೆ ಹೋಗಿದೆಯಲ್ಲವೇ? ನಾನು ಮಾತನಾಡಿದ್ದೂ ಕೂಡ ರೆಕಾರ್ಡಗೆ ಹೋಗಬೇಕಾಗುತ್ತದೆ. If it has not gone into records, I will not speak.

ಅಧ್ಯಕ್ಷರು :– ಬೇರೆಯವರು ಯಾರೂ ಮಾತನಾಡಲು ನಾನು ಯಾರಿಗೂ ಪರ್ಮಿಶನ್ ಕೊಟ್ಟಿಲ್ಲ.

Sri B. Somashekar :- I must be allowed to speak.

ಅಧ್ಯಕ್ಷರು :– ಆಯಿತು, ಇದಾದ ಮೇಲೆ ಬರುತ್ತದೆ ಬಿಡಿ. ತಾವುಗಳೆಲ್ಲರೂ ಕುಳಿತುಕೊಳ್ಳಿ.

– ಗೊಂದಲ –

ನಾನು ಉತ್ತರವಾದ ಮೇಲೆ ಅಲೋ ಮಾಡುತ್ತೇನೆಂದು ಹೇಳಿದ್ದೇನೆ. ಅಲೋ ಮಾಡುವುದಿಲ್ಲವೆಂದರೆ ತಾನೇ ತಾವುಗಳು ನನ್ನ ಮೇಲೆ ಅಬ್ಜಕ್ಷನ್ ಮಾಡಬೇಕಾದುದು? Afterwards, I will allow,

– ಗೊಂದಲ –

ಅವರು ರಿಪ್ಲೈ ಕೊಟ್ಟಮೇಲೆ ತಾವುಗಳು ಮಾತನಾಡಿ. ಅವರುಗಳು ರೈತರ ಕಷ್ಟಗಳನ್ನು ಹೇಳಿಕೊಳ್ಳುವುದರಲ್ಲಿ ತಪ್ಪಿಲ್ಲ.

ಬಿ. ಸೋಮಶೇಖರ್ (ಮಳವಳ್ಳಿ) :– ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ಕೆಂದ್ರಸರಕಾರದವರು ಕಬ್ಬುಬೆಳೆಗಾರರ ವಿಚಾರದಲ್ಲಿ ಮಲತಾಯಿಧೋರಣೆಯನ್ನು ಮಾಡಿದೆ ಎಂಬುದು. ನಾವು ವಿರೋಧಪಕ್ಷದವರೂ ಕೂಡ ಕೇಂದ್ರ ಸರಕಾರದವರು ಕೊಟ್ಟ ಹಣವನ್ನು ರಾಜ್ಯ ಸರಕಾರದವರು ಬಳಸಿಕೊಂಡಿಲ್ಲವೆಂಬ ಆಪಾದನೆಯನ್ನೂ ಕೂಡ ಮಾಡಿದ್ದೇವೆ. ಈಗ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ. ಕೇಂದ್ರ ಸರಕಾರದವರು ಈ ರೀತಿಯಾಗಿ ನಡೆದುಕೊಂಡಿರುವ ವಿಚಾರದಲ್ಲಿ ರಾಜ್ಯ ಸರಕಾರವು ಯಾವರೀತಿಯಾಗಿ ನಡೆದುಕೊಂಡಿದೆ, ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಬೇಕಾಗುತ್ತದೆ. ಈ ಎರಡೂ ವಿಚಾರಗಳಲ್ಲಿಯೂ ಒಂದು ನಿರ್ಣಯವನ್ನು ಮಂಡಿಸಿ. ಆ ನಿರ್ಣಯಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ.

ಅಧ್ಯಕ್ಷರು :– ಆಯಿತು, ಆಯಿತು, ಮಾನ್ಯ ಖರ್ಗೆಯವರು ತಮ್ಮ ಉತ್ತರವನ್ನು ಪ್ರಾರಂಭಿಸಿ.

2. ನಿಯಮ 159ರ ಪ್ರಸ್ತಾವನೆ ಮೇಲೆ ನಡೆದ ಚರ್ಚೆಗ ಸರ್ಕಾರದ ಉತ್ತರ

ವಿಷಯ :– ರಾಜ್ಯದಲ್ಲಿ ತಲೆ ದೋರಿರುವ ಬರಗಾಲ ಪರಿಸ್ಥಿತಿ ಬಗ್ಗೆ

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :– ಸನ್ಮಾನ್ಯ ಸಭಾಧ್ಯಕ್ಷರೇ ಬರಗಾಲದ ವಿಷಯದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಬರಗಾಲದ ಬಗ್ಗೆ ಪ್ರಸ್ತಾಪ ಮಾಡಿದಂಥ ನಿರ್ಣಯದ ಮೇಲೆ, ಸಾಕಷ್ಟು ಚರ್ಚೆಯಾಗಿದೆ. ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಜಗದೀಶ ಶೆಟ್ಟರ್‌ರವರು, ಮತ್ತು ಎಸ್.ಎಸ್. ಪಾಟೀಲರವರು, ಕೆ.ಎಂ. ಕೃಷ್ಣಮೂರ್ತಿಯವರು, ಕೆ. ಶ್ರೀನಿವಾಸಗೌಡರು, ವೈ.ಕೆ. ರಾಮಯ್ಯನವರು, ಬಿ.ಆರ್. ಯಾವಗಲ್‌ರವರು, ಎ. ರಾಮದಾಸ್‌ರವರು, ಗುರುಸ್ವಾಮಿಯವರು, ಮುದ್ದಹನುಮೇಗೌಡರು, ಪಿ.ಜಿ. ಆರ್. ಸಿಂಧ್ಯರವರು, ಪ್ರಕಾಶ್ ಖಂಡ್ರೆಯವರು, ಕರಡಿ ಸಂಗಣ್ಣರವರು, ಎ.ಎಸ್. ಗುರುಸ್ವಾಮಿಯವರು, ಶಿವಾನಂದ ಎಸ್. ಪಾಟೀಲ್‌ರವರು, ಬಿ. ಸೋಮಶೇಖರ್‌ರವರು, ಕರಿಯಣ್ಣನವರು, ರೇವು ನಾಯಕ್ ಬೆಳಮಗಿಯವರು, ಹಾಗೂ ಕೊನೆಯದಾಗಿ ಚೆಲುವನಾರಾಯಣ ಸ್ವಾಮಿಯವರು ಸಾಕಷ್ಟು ಬರಪರಿಸ್ಥಿತಿ ಬಗ್ಗೆ ಮತ್ತು ಈ ವಿಚಾರದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಲೋಪದೋಷಗಳು ಎಲ್ಲಿವೆ ಎಂಬುದನ್ನು ಕೂಡ, ಅವರ ಪ್ರಕಾರ ಎಲ್ಲೆಲ್ಲಿ ನಮ್ಮ ವರದಿ ಲೋಪವಾಗಿದೆ ಎಂಬ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಸುಮಾರು 18 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. 16 ಘಂಟೆಗಳ ಕಾಲ ಚರ್ಚೆಯು ಇಲ್ಲಿ ನಡೆದಿದೆ. ಅದರಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ಈ ಸದನದ ಮುಂದೆ ಪ್ರಸ್ತಾಪ ಮಡತಕ್ಕಂಥಾದ್ದು ಬಹಳ ಒಳ್ಳೆಯದು ಎಂದು ತಿಳಿದುಕೊಂಡು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಸೀಸನಲ್ ಕಂಡೀಶನ್ ಹೇಗೆ ಇದೆ ಮತ್ತು ಈ ಸೀಸನಲ್ ಕಂಡೀಶನ್‌ನಲ್ಲಿ ನಮಗೆ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)